## ಪೆಟ್ರೋಲ್

ಪೆಟ್ರೋಲ್ ಪಂಪಿನಲ್ಲಿ ಒಬ್ಬ ಹುಡುಗಿ ಸಾಲಲ್ಲಿ ಸ್ಕೂಟಿ ನಿಲ್ಲಿಸಿಕೊಂಡು ನಿಂತಿದ್ದಳು. ಪೆಟ್ರೋಲ್ ಪಂಪಿನ ಹುಡುಗ ಅವಳನ್ನ ನೋಡಿ ಪದೇ ಪದೇ ನಗ್ತಾ ಇದ್ದ. ಸನ್ನೆ ಮೂಲಕ ಏನೊ ಹೇಳಲು ಪ್ರಯತ್ನಿಸುತ್ತಿದ್ದ. ಹುಡುಗಿಗೆ ನಾಚಿಕೆ, ಅವನು ನೋಡಿದಾಗೆಲ್ಲಾ ಆಕೆ ತಲೆ ಕೆಳಗೆ ಹಾಕುತ್ತಿದ್ದಳು. ಕೊನೆಯಲ್ಲಿ ಹುಡುಗಿಯ ಪಾಳಿ ಬಂತು. ನಾಚುತ್ತಲೇ ಅವನ ಕಡೆಗೆ ನೋಡಿದಳು. ಆಗ ಕಡೆಯದಾಗಿ ಹುಡುಗ ಮಾತನಾಡಿದ, 'ಆಗಲಿಂದ ಹೇಳ್ತಾ ಇದ್ದೀನಿ, ನಿಮ್ದು ಎಲೆಕ್ಟ್ರಿಕ್ ಸ್ಕೂಟಿ, ಇಲ್ಯಾಕೆ ನಿಂತಿದ್ದೀರಿ ಅಂತ...'

**ಅನುಪಮಾ ವಸ್ತದ್**



## ನಾಯಿ ತಿನ್ತು ಅನ್ತೇನೆ

ಹೊಸದಾಗಿ ಶಾಲೆಗೆ ಬಂದ ಯುಕೆಜಿ ಮಗು ಶಾಲೆಯಲ್ಲಿ ಊಟ ಮಾಡಲು ತುಂಬಾ ಹಟ ಮಾಡುತ್ತಿತ್ತು. ಮೇಷ್ಟ್ರು ಚೂಟಿ ಮಗುವನ್ನು ಮಾತನಾಡಿಸುತ್ತ, 'ಊಟಕ್ಕೆ ಏನು ತಂದಿದ್ದೀಯ?' ಎಂದು ಕೇಳಿದರು. 'ಅಮ್ಮಾ ಏನು ಕಟ್ಟಿದ್ದಾರೊ ಗೊತ್ತಿಲ್ಲ' ಎಂದಿತು ಮಗು. 'ಅಮ್ಮ ಏನು ಕಟ್ಟಿದ್ದಾರೆ ನೋಡೋಣ?' ಎನ್ನುತ್ತ ಡಬ್ಬಿಯನ್ನು ಬಿಚ್ಚಿ ನೋಡಿದರು. ಚಿತ್ರಾನ್ನ ಇತ್ತು. 'ಓ... ಚಿತ್ರಾನ್ನ ಇದೆ! ನಾನು ತಿನ್ನಲಾ?' ಎಂದು ಕೇಳಿದರು. 'ತಿನ್ನಿ' ಎಂದು ಮಗು ಹೇಳಿತು. 'ಕೇಳಿದ ತಕ್ಷಣ ಕೊಟ್ಟುಬಿಟ್ಟೆ ಅಲ್ಲ, ನಿನಗೆ ಬೇಡವಾ?' ಎಂದರು. 'ನನಗೆ ಹಸಿವೆ ಇಲ್ಲ. ಮನೆಗೆ ಹೋಗಿ ತಿಂತಿನಿ' ಅಂದಳು. 'ಅದೇನೋ ಸರಿ, ಆದ್ರೆ ಊಟಾನ ಮೇಷ್ಟ್ರಿಗೆ ಕೊಟ್ಟೆ ಅಂತ ಹೇಳಿದ್ರೆ ನಿಮ್ಮ ಅಮ್ಮ ಬೈಯಲ್ವಾ? ಆಗೇನು ಮಾಡ್ತೀಯಾ?' ಕೇಳಿದರು. ಮಗು, 'ಹೋಗಿ ಸರ್, ನಂಗೆ ಅಷ್ಟೂ ಗೊತ್ತಾಗೋಲ್ವ? ಅಮ್ಮ ಕೇಳಿದ್ರೆ ನಾಯಿ ಬಂದು ಊಟಾನೆಲ್ಲ ತಿಂದು ಹೋಯ್ತು ಅಂದ್ಬಿಡ್ತೀನಿ' ಎಂದು ಹೇಳಿತು.



**ಪ. ರಾಮಕೃಷ್ಣ ಶಾಸ್ತ್ರಿ**